# ಕರ್ನಾಟಕವಿಧಾನಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 151 |
| **ಸದಸ್ಯರ ಹೆಸರು** | : | ಶ್ರೀ ಕೆ.ಎ. ತಿಪ್ಪೇಸ್ವಾಮಿ<br>(ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸುವ ದಿನಾಂಕ** | : | 16.02.2022. |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿ ಅಧಿನಿಯಮ-2015 ಅಡಿಯಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿ ಸ್ಥಾಪಿಸಲಾಗಿದೆಯೇ; ಇದರ ಕೇಂದ್ರ ಸ್ಥಾನ ಮತ್ತು ಆಡಳಿತ ಕಚೇರಿಗಳನ್ನು ಯಾವ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ; (ಈ ಮಂಡಳಿಯ ಕಾರ್ಯಕಾರಿ ಸಮಿತಿ ವಿವರ ಒಳಗೊಂಡಂತೆ ಪೂರ್ಣ ವಿವರ ನೀಡುವುದು) | ಹೌದು,<br><br>ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿರುವ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ನಿರ್ದೇಶನಾಲಯದ ಕಛೇರಿಯನ್ನು ಪ್ರಸ್ತುತ ಕರ್ನಾಟಕ ಜಲಸಾರಿಗೆ ಮಂಡಳಿಯ ಕೇಂದ್ರ ಸ್ಥಾನ ಮತ್ತು ಆಡಳಿತ ಕಛೇರಿಯನ್ನಾಗಿ ಉಪಯೋಗಿಸಲಾಗುತ್ತಿದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 13 ಶಾಸನ 2021, ದಿನಾಂಕ: 05.04.2021 ರಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನೊಳಗೊಂಡ ಅಧಿಸೂಚನೆ ಹೊರಡಿಸಲಾಗಿದ್ದು, **ವಿವರಗಳನ್ನು ಅನುಬಂಧ -1ರಲ್ಲಿ ನೀಡಿದೆ.** |
| ಆ) | ಈ ಮಂಡಳಿ ರಚಿತವಾದ ನಂತರ ಎಷ್ಟು ಕಾರ್ಯಕಾರಿ ಸಮಿತಿ ಸಭೆಗಳನ್ನು ನಡೆಸಲಾಗಿದೆ ಮತ್ತು ಯಾವ ಜಿಲ್ಲೆಯಲ್ಲಿ ನಡೆಸಲಾಗಿದೆ ಮತ್ತು ಸಭೆಗಳಲ್ಲಿ ಕೈಗೊಂಡಿರುವ ಪ್ರಮುಖ ನಿರ್ಣಯಗಳು ಯಾವುವು; ಈ ಸಭೆಗಳಲ್ಲಿ ಕರಾವಳಿ ಕರ್ನಾಟಕ ಸಮಗ್ರ ಅಭಿವೃದ್ಧಿಗೆ ಯೋಜನೆ ತಯಾರಿಸಲು ತೀರ್ಮಾನಿಸಲಾಗಿದೆಯೇ; ಹಾಗಿದ್ದಲ್ಲಿ ಈ ಯೋಜನೆ ತಯಾರಿಕೆ ಯಾವ ಹಂತದಲ್ಲಿದೆ; (ಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಜಲಸಾರಿಗೆ ಮಂಡಳಿಯು ಒಟ್ಟು 6 ಸಭೆಗಳನ್ನು ಬೆಂಗಳೂರಿನಲ್ಲಿ ನಡೆಸಲಾಗಿರುತ್ತದೆ. ಸದರಿ ಸಭೆಗಳಲ್ಲಿ ತೆಗೆದುಕೊಂಡ ಪ್ರಮುಖ ನಿರ್ಣಯಗಳಿಗೆ ಕುರಿತಂತೆ ಮಂಡಳಿಯ ನಡವಳಿಗಳ ಉದ್ಧೃತ ಭಾಗದ ಪ್ರತಿಗಳನ್ನು **ಅನುಬಂಧ-2 ರಲ್ಲಿ ನೀಡಿದೆ.**<br><br>ಕರಾವಳಿಯ ಸಮಗ್ರ ಅಭಿವೃದ್ಧಿಗೆ ಯೋಜನೆಗಳನ್ನು ತಯಾರಿಸಲು ಈಗಾಗಲೇ Karnataka Maritime Perspective Plan ತಯಾರಿಸಲಾಗಿದೆ. |

| | | |
|---|---|---|
| ಇ) | ರಾಜ್ಯದಲ್ಲಿರುವ ಸಣ್ಣ ಬಂದರುಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ, ಗುಜರಾತ್ ರಾಜ್ಯ ಮಾದರಿಯಲ್ಲಿ ಸಾರ್ವಜನಿಕ ಖಾಸಗಿ ಭಾಗಿತ್ವ ಅಥವಾ ಖಾಸಗಿ ಕ್ಷೇತ್ರದಲ್ಲಿ ಅಭಿವೃದ್ಧಿಗೊಳಿಸಲು ನಿರ್ಣಯಿಸಲಾಗಿದೆಯೇ; (ಹಾಗಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು) | ಹೌದು.<br><br>ಉತ್ತರ ಕನ್ನಡ ಜಿಲ್ಲೆಯ ಕೇಣಿ ಮತ್ತು ಪಾವಿನಕುರ್ವೆ ಬಂದರುಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ನಿರ್ಣಯಿಸಲಾಗಿದೆ. ಪೂರ್ಣ ಮಾಹಿತಿಯನ್ನು ಅನುಬಂಧ-3 ರಲ್ಲಿ ನೀಡಿದೆ. |
| ಈ) | ರಾಜ್ಯದಲ್ಲಿನ ಬೇಲೆಕೇರಿ ಬಂದರುವಿನ ದಶಕ ಕಾಲದವರೆಗೂ ದಾಸ್ತಾನು ಮಾಡಲಾದ ಕಬ್ಬಿಣ ಅದಿರನ್ನು ಕೋರ್ಟ್ ತೀರ್ಮಾನದ ಅನ್ವಯ ಮಾರಾಟ ಮಾಡಲಾಗಿದೆಯೇ? (ಹಾಗಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು) | ಇಲ್ಲ.<br><br>ಬೇಲಿಕೇರಿ ಬಂದರಿನಲ್ಲಿ ದಾಸ್ತಾನು ಮಾಡಲಾದ ಕಬ್ಬಿಣದ ಅದಿರನ್ನು ಕೋರ್ಟ್ ತೀರ್ಮಾನದ ಅನ್ವಯ ಮಾರಾಟ ಮಾಡಲು ಅರಣ್ಯ ಇಲಾಖೆಯವರು ಕ್ರಮ ಕೈಗೊಳ್ಳುತ್ತಾರೆ. |

**ಕಡತಸಂಖ್ಯೆ: IDD 16 BNS 2022 (E-691139)**

(ಎಸ್.ಅಂಗಾರ)
ಮೀನುಗಾರಿಕೆ,ಬಂದರುಮತ್ತು
ಒಳನಾಡುಜಲಸಾರಿಗೆಸಚಿವರು

ಅನುಬಂಧ - 1

# ಕರ್ನಾಟಕ ರಾಜ್ಯಪತ್ರ


ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ - ೪ಎ<br>Part - IVA | ಬೆಂಗಳೂರು, ಸೋಮವಾರ, ೦೫, ಏಪ್ರಿಲ್, ೨೦೨೧ (ಚೈತ್ರ, ೧೫, ಶಕವರ್ಷ, ೧೯೪೩)<br>BENGALURU, MONDAY, 05, APRIL, 2021 (Chaitra, 15, SHAKAVARSHA, 1943) | ನಂ 401<br>No. 401 |


**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 13 ಶಾಸನ 2021, ಬೆಂಗಳೂರು, ದಿನಾಂಕ: 05.04.2021.**

ಕರ್ನಾಟಕ ಜಲಸಾರಿಗೆ ಮಂಡಳಿ (ತಿದ್ದುಪಡಿ) ವಿಧೇಯಕ, 2021ಇದಕ್ಕೆ 2021 ರ ಏಪ್ರಿಲ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021 ರ ಕರ್ನಾಟಕ ಅಧಿನಿಯಮ ಸಂಖ್ಯೆ:18 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.-

## 2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 18

(2021 ರ ಏಪ್ರಿಲ್ ತಿಂಗಳ 5ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

## ಕರ್ನಾಟಕ ಜಲಸಾರಿಗೆ ಮಂಡಳಿ ( ತಿದ್ದುಪಡಿ) ಅಧಿನಿಯಮ, 2021

(2021 ರ ಏಪ್ರಿಲ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಜಲಸಾರಿಗೆ ಮಂಡಳಿ ಅಧಿನಿಯಮ, 2015ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಜಲಸಾರಿಗೆ ಮಂಡಳಿ ಅಧಿನಿಯಮ, 2015ನ್ನು (2017ರ ಕರ್ನಾಟಕ ಅಧಿನಿಯಮ 41) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಜಲಸಾರಿಗೆ ಮಂಡಳಿ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-**ಕರ್ನಾಟಕ ಜಲಸಾರಿಗೆ ಮಂಡಳಿ ಅಧಿನಿಯಮ, 2015ರ (2017ರ ಕರ್ನಾಟಕ ಅಧಿನಿಯಮ 41) (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (ಡಿ) ಖಂಡದಲ್ಲಿ, "ಮತ್ತು ಅದು 9ನೇ ಪ್ರಕರಣದಡಿಯಲ್ಲಿ

ಆತನ ಸ್ಥಾನದಲ್ಲಿ ಕಾರ್ಯನಿರ್ವಹಿಸಲು ನೇಮಿಸಲಾದ ವ್ಯಕ್ತಿಯನ್ನು ಒಳಗೊಳ್ಳುತ್ತದೆ" ಎಂಬ ಪದಗಳನ್ನು ಮತ್ತು ಅಂಕೆಯನ್ನು ಬಿಟ್ಟುಬಿಡತಕ್ಕದ್ದು.

**3. 3ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿ,-

(i) (2)ನೇ ಉಪಪ್ರಕರಣದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಮಂಡಳಿಯು ಈ ಮುಂದಿನ ಸದಸ್ಯರುಗಳನ್ನು ಹೊಂದಿರತಕ್ಕದ್ದು, ಎಂದರೆ :

| | | |
|---|---|---|
| 1 | ಮುಖ್ಯಮಂತ್ರಿ | ಅಧ್ಯಕ್ಷರು |
| 2 | ಬಂದರು ಮತ್ತು ಒಳನಾಡು ಜಲ ಸಾರಿಗೆ ಮಂತ್ರಿ | ಉಪಾಧ್ಯಕ್ಷರು |
| 3 | ಸರ್ಕಾರವು ನಾಮ ನಿರ್ದೇಶನ ಮಾಡಿದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು | ಪದನಿಮಿತ್ತ ಸದಸ್ಯರು |
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ. | ಪದನಿಮಿತ್ತ ಸದಸ್ಯರು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಪದನಿಮಿತ್ತ ಸದಸ್ಯರು |
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ. | ಪದನಿಮಿತ್ತ ಸದಸ್ಯರು |
| 7 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | ಪದನಿಮಿತ್ತ ಸದಸ್ಯರು |
| 8 | ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ, ನೌಕಾಮಂತ್ರಾಲಯ. | ಪದನಿಮಿತ್ತ ಸದಸ್ಯರು |
| 9 | ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರಾವಳಿ ಭದ್ರತೆಯ ಪ್ರಭಾರದಲ್ಲಿರುವ ಆಂತರಿಕ ಭದ್ರತಾ ವಿಭಾಗ. | ಪದನಿಮಿತ್ತ ಸದಸ್ಯರು |
| 10 | ಬಂದರುಗಳ ನಿರ್ದೇಶಕ (ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ಕಾರ್ಯಾಚರಣೆಗಳು) | ಪದನಿಮಿತ್ತ ಸದಸ್ಯರು |
| 11 | ಮೀನುಗಾರಿಕೆ ನಿರ್ದೇಶಕ, ಕರ್ನಾಟಕ ಸರ್ಕಾರ | ಪದನಿಮಿತ್ತ ಸದಸ್ಯರು |
| 12 | ಪ್ರಭಾರದಲ್ಲಿರುವ ನೌಕಾ ಅಧಿಕಾರಿ, ಐಎನ್‌ಎಸ್ ಕದಂಬ, ಕಾರವಾರ, ಉತ್ತರ ಕನ್ನಡ ಜಿಲ್ಲೆ | ಪದನಿಮಿತ್ತ ಸದಸ್ಯರು |
| 13 | ಕಮಾಂಡರ್, ಕರಾವಳಿ ರಕ್ಷಣಾ ಜಿಲ್ಲೆ ಕೇಂದ್ರ ಸ್ಥಾನ, ಸಂ.3, ನವ ಮಂಗಳೂರು. | ಪದನಿಮಿತ್ತ ಸದಸ್ಯರು |
| 14 | ಸೀಮಾ ಸುಂಕ ಆಯುಕ್ತ, ಕರ್ನಾಟಕ | ಪದನಿಮಿತ್ತ ಸದಸ್ಯರು |
| 15 | ಕೆಳಕಂಡಂತೆ ಸರ್ಕಾರವು ನಾಮನಿರ್ದೇಶಿಸಿದ ಬಂದರುಗಳ ಅಭಿವೃದ್ಧಿಯಲ್ಲಿ ಪರಿಣಿತರಾದ ನಾಲ್ವರು ವ್ಯಕ್ತಿಗಳು:- | |
| | (i) ಮಾಸ್ಟರ್ ಮರೈನರ್ (ಎಫ್‌ಜಿ) ವಿದ್ಯಾರ್ಹತೆ ಹೊಂದಿರುವ ಮತ್ತು ಬಂದರುಗಳು, ನೌಕಾಯಾನ, ಜಲಸಾರಿಗೆ ವ್ಯವಹಾರಗಳು ಅಥವಾ ಅಂಥ ವಿಷಯಗಳ ನಿರ್ವಹಣೆ ಮತ್ತು ವ್ಯವಸ್ಥಾಪನೆಯಲ್ಲಿ ಪರಿಣಿತಿ ಮತ್ತು ಅನುಭವವುಳ್ಳ ಒಬ್ಬ ಸದಸ್ಯ. | ಸದಸ್ಯರು<br>ಸದಸ್ಯರು |
| | (ii) ಹಾರ್ಬರ್ ಎಂಜಿನಿಯರಿಂಗ್ ಅಥವಾ ಸಿವಿಲ್ ಎಂಜಿನಿಯರಿಂಗ್ ವಿಷಯದಲ್ಲಿ ಪರಿಣಿತಿ, ಅನುಭವ ಮತ್ತು ಶೈಕ್ಷಣಿಕ ಪದವಿ ವಿದ್ಯಾರ್ಹತೆ ಹೊಂದಿರುವ ಹಾಗೂ ಹಾರ್ಬರ್ ಕೆಲಸಗಳಿಗೆ ಸಂಬಂಧಿಸಿದಂತೆ ಅಪಾರ ಅನುಭವವುಳ್ಳ ಒಬ್ಬ ಸದಸ್ಯ. | ಸದಸ್ಯರು |

| | | |
|---|---|---|
| | (iii) ಕರಾವಳಿ ಜಿಲ್ಲೆಗಳಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಛೇಂಬರನ್ನು ಪ್ರತಿನಿಧಿಸುವ ಒಬ್ಬ ಸದಸ್ಯ.<br>(iv) ಹಣಕಾಸು ನಿರ್ವಹಣೆಯಲ್ಲಿ ಪರಿಣಿತಿ ಹೊಂದಿರುವ ಒಬ್ಬ ಸದಸ್ಯ. | ಸದಸ್ಯರು |
| 16 | ಕೋಸ್ಟಲ್ ಎಂಜಿನಿಯರಿಂಗ್, ಮರೈನ್ ಎಂಜಿನಿಯರಿಂಗ್ ಅಥವಾ ಸಮುದ್ರ ಕೊರೆತ ಪ್ರತಿಬಂಧಕ ಅಥವಾ ಕರಾವಳಿ ರಕ್ಷಣಾ ಕೆಲಸಗಳಲ್ಲಿ ಅನುಭವ, ಪರಿಣಿತಿಯನ್ನು ಹೊಂದಿರುವ ಸರ್ಕಾರವು ನಾಮನಿರ್ದೇಶಿಸಿದ ಒಬ್ಬ ಸದಸ್ಯ. | ಸದಸ್ಯರು |
| 17 | ಮಂಡಳಿಯ ಸದಸ್ಯ (ತಾಂತ್ರಿಕ) (ಮುಖ್ಯ ಇಂಜಿನಿಯರ್ ದರ್ಜೆಯ ನಾಮನಿರ್ದೇಶಿತ) | ಪದನಿಮಿತ್ತ ಸದಸ್ಯರು |
| 18 | ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ. | ಸದಸ್ಯ ಕಾರ್ಯದರ್ಶಿ |

(ii) (4)ನೇ ಉಪಪ್ರಕರಣದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ.-

"(4) ಮಂಡಳಿಯು ಅಧ್ಯಕ್ಷರ ಅನುಮೋದನೆಯೊಂದಿಗೆ ಯಾವುದೇ ಇತರ ಅಧಿಕಾರಿಗಳನ್ನು ಆಹ್ವಾನಿತ ಸಹ ಸದಸ್ಯರನ್ನಾಗಿ ಮಾಡಿಕೊಳ್ಳಬಹುದು ಅಲ್ಲದೆ, ಕರ್ನಾಟಕ ಸರ್ಕಾರವು ಸಹ ನಿರ್ದಿಷ್ಟ ಸಭೆಗಳಿಗಾಗಿ ಶಾಶ್ವತ ಆಹ್ವಾನಿತರನ್ನು ನೇಮಿಸಬಹುದು."

**4. 9ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 9ನೇ ಪ್ರಕರಣದಲ್ಲಿ "ಸರ್ಕಾರವು ನೇಮಕ ಮಾಡಬಹುದಾದ ಅಂಥ ವ್ಯಕ್ತಿಯು ಅಧ್ಯಕ್ಷರಾಗಿ ಕಾರ್ಯನಿರ್ವಹಿಸತಕ್ಕದ್ದು." ಎಂಬ ಪದಗಳ ಬದಲಾಗಿ "ಮೂಲಸೌಲಭ್ಯಗಳ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿಯು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. 10ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 10ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ "ಹಾಜರಿದ್ದ ಸದಸ್ಯರು ತಮ್ಮ ಪೈಕಿಯಿಂದ ಆಯ್ಕೆ ಮಾಡುವ ಯಾವೊಬ್ಬ ವ್ಯಕ್ತಿಯು" ಎಂಬ ಪದಗಳ ಬದಲಾಗಿ" ಮೂಲ ಸೌಲಭ್ಯಗಳ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**6. 12ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 12ನೇ ಪ್ರಕರಣದ ಪರಂತುಕದಲ್ಲಿ "ಉಪಾಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ" ಎಂಬ ಪದಗಳ ಬದಲಾಗಿ"ಉಪಾಧ್ಯಕ್ಷರಿಗೆ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**7. 16ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 16ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ "ಆದರ" ಎಂಬ ಪದದ ಬದಲಾಗಿ"ಅದರ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**8. 24ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 24ನೇ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ, "ಐದು ವರ್ಷಗಳಿಗೆ" ಎಂಬ ಪದಗಳ ಬದಲಾಗಿ "ಮೂವತ್ತು ವರ್ಷಗಳಿಗೆ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

**9. 34ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 34ನೇ ಪ್ರಕರಣದ (4)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ -

"(5) ಜಲಸಾರಿಗೆ ಮಂಡಳಿಯು ಸೀಮಾಸುಂಕ ಪ್ರದೇಶಗಳಲ್ಲಿ ನೌಕಾ ಸರಕುಗಳ (Cargo) ನಿರ್ವಹಣಾ ವಿನಿಯಮಗಳು, 2009ರ ಅಡಿಯಲ್ಲಿ ನೌಕಾ ಸರಕು ಅಭಿರಕ್ಷಕನ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕಾಗಿ ನೌಕಾ ಸರಕು ಅಭಿರಕ್ಷಕನನ್ನು ನೇಮಕ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು."

**10. 81ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 81ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿನ ಪರಂತುಕದಲ್ಲಿ "ಹತ್ತು ಸಾವಿರ ರೂಪಾಯಿಗಳಿಗೆ" ಮತ್ತು "ಒಂದು ಲಕ್ಷ ರೂಪಾಯಿಗಳಿಗೆ" ಎಂಬ ಪದಗಳ ಬದಲಾಗಿ "ಐವತ್ತು ಸಾವಿರ ರೂಪಾಯಿಗಳಿಗೆ" ಮತ್ತು "ಹತ್ತು ಲಕ್ಷ ರೂಪಾಯಿಗಳಿಗೆ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

**PARLIAMENTARY AFFAIRS AND LEGISLATION SECRETARIAT**

**NOTIFICATION**

**NO. DPAL 13 SHASANA 2021, BENGALURU, DATED: 05.04.2021**

ಭಾರತ ಸಂವಿಧಾನದ 348ನೇ ಅನುಚ್ಛೇದದ ಖಂಡ (3)ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಜಲಸಾರಿಗೆ ಮಂಡಳಿ (ತಿದ್ದುಪಡಿ) ಅಧಿನಿಯಮ, 2021 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ:18)ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ (ಭಾಗ-IV) ರಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

# KARNATAKA ACT NO 18 OF 2021

(First published in the Karnataka Gazette Extra-ordinary on the 5th day of April, 2021)

## THE KARNATAKA MARITIME BOARD (AMENDMENT) ACT, 2021

(Received the assent of the Governor on the 5th day of April, 2021)

An Act to amend the Karnataka Maritime Board Act, 2015.

Whereas it is expedient to amend the Karnataka Maritime Board Act, 2015 (Karnataka Act 41 of 2017) for the purposes hereinafter appearing;

Be it enacted by the Karnataka State Legislature in the seventy second year of the Republic of India, as follows:-

**1. Short title and commencement.**-(1) This Act may be called the Karnataka Maritime Board (Amendment) Act, 2021.

(2) It shall come into force at once.

**2. Amendment of section 2.**- In section 2 of the Karnataka Maritime Board Act, 2015 (Karnataka Act 41 of 2017) (hereinafter referred to as the Principal Act), in clause (d) the words and figure "and includes the person appointed to act in his place under section 9" shall be omitted.

**3. Amendment of section 3.**-In section 3 of the Principal Act,-

(i)for sub-section (2), the following shall be substituted, namely:-

"(2) The Board shall consist of the following members, namely:-

| | | |
|---|---|---|
| 1. | The Chief Minister | Chairman |
| 2. | The Minister in charge of Ports and Inland Water Transport | Vice-Chairman |
| 3. | The Additional Chief Secretary to Government or Additional Chief Secretary and Development Commissioner nominated by the Government | Ex-officio member |
| 4. | The Principal Secretary to Government, Infrastructure Development, Ports and Inland Water Transport Department. | Ex-officio member |
| 5. | The Principal Secretary to Government, Finance Department. | Ex-officio member |
| 6. | The Principal Secretary to Government, Public Works Engineering Department | Ex-officio member |

| | | |
|---|---|---|
| 7. | The Principal Secretary to Government, Industries and Commerce Department. | Ex-officio member |
| 8. | The Joint Secretary to Government of India, Ministry of Shipping | Ex-officio member |
| 9. | The Inspector General of Police, Internal Security wing, in charge of costal Security | Ex-officio member |
| 10. | The Director of Ports (Maritime and Inland Water Transport Operations). | Ex officio member |
| 11 | The Director of Fisheries, Government of Karnataka | Ex-officio member |
| 12. | The Naval Officer in charge, INS Kadamba, Karwar Uttara Kannada District | Ex-officio member |
| 13. | The Commander, Coast Guard District, Head Quarters, No.3, New Mangalore. | Ex-officio member |
| 14. | Commissioner of Customs, Karnataka | Ex-officio member |
| 15. | Four persons having expertise in the development of ports nominated by the Government as shown below:-<br>(i) One member who has qualification of Master Mariner (FG) who has experience and expertise in matters relation to ports, shipping, maritime affairs or in the administration or management of such matters. | Member |
| | (ii) One member who has experience, expertise and academic qualification of a Degree in the subject of Harbour Engineering or civil Engineering and has wide experience relating to Harbour works. | Member |
| | | Member |
| | (iii) One member representing the chamber of commerce and Industry in the Coastal districts. | Member |
| | (iv) One member who has expertise in financial Management | |
| 16. | One member who has experience, expertise in coastal engineering, marine engineering or Prevention of sea erosion or coastal protection works nominated by the Government | Member |
| 17. | The Member (Technical) of the Board (in rank of Chief Engineer, to be nominated) | Ex-officio member |
| 18. | The Chief Executive officer of the Board. | Member Secretary |

(ii) for sub section (4),the following shall be substituted, namely,

"(4) The Board may co-opt any other officers as invitee with the approval of the Chairman. The Government of Karnataka may in addition appoint permanent invitee for a specific meeting."

**4. Amendment of section 9.-** In section 9 of the principal Act, for the words "such person, as the Government may appoint, shall act as the Chairman" the words "Additional Chief Secretary or Principal Secretary in charge of the Infrastructure Development, Ports and Inland Water Transport Department shall preside over the meeting' shall be substituted.

**5. Amendment of section 10.-**In section 10 of the principal Act, in sub-section (3), for the words "any person chosen by the members present from amongst themselves" the words "Additional Chief Secretary or Principal Secretary to Government incharge of Infrastructure development, Port and Inland Water Transport" shall be substituted.

**6. Amendment of section 12.-** In section 12 of the principal Act, in the proviso, for the word "Deputy-Chairman" the word "Vice-Chairman" shall be substituted.

**7. Amendment of section 16.-** In section 16 of the principal Act, in sub section (3)for the word "therefore" the word "thereof" shall be substituted.

**8. Amendment of section 24.-**In section 24 of the principal Act, in clauses (a) and (b) for the words "five years" the words "thirty years" shall respectively be substituted.

**9. Amendment of section 34.-**In section 34 of the principal Act, after sub-section (4), the following shall be inserted, namely:-

"(5) The Maritime Board shall be authorised to appoint Custodian of Cargo for carrying out the responsibilities of the Custodian of cargo under Handling of Cargo in Customs Areas Regulations, 2009."

**10. Amendment of section 81.-** In section 81of the principal Act, in sub-section (2),in the proviso for the words "ten thousand rupees" and "one lakh rupees" the words "fifty thousand rupees" and "ten lakh rupees" shall respectively be substituted.

RNI No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



The above translation of **ಕರ್ನಾಟಕ ಜಲಸಾರಿಗೆ ಮಂಡಳಿ (ತಿದ್ದುಪಡಿ) ಅಧಿನಿಯಮ, 2021 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 18)** be published in the official Gazette under clause (3) of Article 348 of the Constitution of India.

**VAJUBHAI VALA**
**GOVERNOR OF KARNATAKA**

By Order and in the name of
the Governor of Karnataka,

**(K. DWARAKANATH BABU)**
Secretary to Government
Department of Parliamentary Affairs
and Legislation

6ಪ್ರವಾಸ-2

**Karnataka Maritime Board**
**Administrative Office: Directorate of Ports & Inland Water Transport Building, Baithkol, Karwar – 581302**
**Telephone: 08382- 221494 Fax: 08382 228918**
**Email: directoratep@gmail.com ;** ceokmb2019@gmail.com

No: CEO/KMB-01/BM/2019-20 Dated: ~~.12.~~2019
02.01.2020

To,

All the Members of Karnataka Maritime Board.

Sir/Madam,

Sub: Karnataka Maritime Board- Proceedings of Karnataka Maritime Board 1st Meeting held on 21.11.2019 at IAS Officers Association Building, Bengaluru- Reg.

Ref: This office Meeting Notice of even No. dated 13.11.2019

****

With reference to the subject cited above, I am enclosing herewith the proceedings of the Karnataka Maritime Board 1st Meeting which was held on 21.11.2019 under the Chairmanship of Additional Chief Secretary to the GoK at IAS Officers Association Building, Bengaluru.

This is for your kind information and needful action

Encl: as above

Your's faithfully,

(Signature)

(Ujjwal Kumar Ghosh IAS)
Chief Executive Officer
Karnataka Maritime Board
Karwar

7.2.4 Budgetary support from the Government is sought under the above head of accounts for the developmental works as stipulated under functions of the Board vide **Section 16 (3).**

7.2.5 The CEO informed to the board that even in Maharashtra Maritime Board and other Maritime Boards State Government has sanctioned the seed money in initial stage for smooth functioning of maritime board and annual budgetary support is inevitable for the performance of Public oriented services like Inland Water Transport/ Ferries Service / Coastal Protection Works etc.,

7.2.6 The Vice Chairman mentioned that already Rs. 39.00 crores is available in the Port Fund Account. The same amount can be utilized in initial stage and instructed to submit the comprehensive proposal for the sanction of seed money to the Government.

**<u>Resolution:</u> After deliberations, the board resolved CEO to monitor the issue after the appointment of CAO and submit comprehensive report to the board.**

## 8 Agenda Item No.8

## Present status of the Port Developmental projects.

### 8.1 Pavinakurve Port Development.:

8.1.1 The Government of Karnataka vide Notification No: PWD 107 PSP 2013 Dated: 09.12.2013 have declared the Port Limits of PAVINKURVE Port in Honnavar Taluk for the development of Captive Port. In terms of traffic this port will be highly dependent on Hinterland comprising Uttar Kannada, Shivamogga, Belagavi, Haveri, Koppal, Bagalkote, Davangere & Bellary districts and also South Maharashtra & Border areas of Andhra Pradesh. Pavinkurve is close to NH-66 & Konkan Railway.

8.1.2 The main cargo to be handled in this Port includes Iron Ore, Manganese Ore, Granite, Coal POL Products, Lime Stones, & Agricultural Products / Marine Products etc.,

8.1.3 M/S. JSW submitted Sue-Moto proposal for developing an all-weather, multi-cargo, Deepwater green field port at Pavinakurve village, near Honnavar, Uttar-Kannada under Swiss Challenge route. A Captive Jetty on PPP Mode at the cost of Rs.1700 crores with Capcity of 15 MTPA.

8.1.4 The Government then requested project proponent to submit the detailed Project Report vide its order No. PWD 08 PSP 2017 dated 28.06.2017. M/s JSW have submitted DPR for the development of this port.

8.1.5 The State Government appointed I-Deck as transactional advisor for scrutiny of DPR. M/s I-Deck updated DPR and RFP / RFQ and draft concession agreement was prepared and submitted to the Government for approval.

8.1.6 The State Government sought certain clarifications from the department on the project. The Port Department has submitted required clarification vide its letter No. PIWT-67/DEV-II/2013 dated 24.07.2019. It is requested to expedite the clearance for the project.

## 8.2 Development of Honnavar Port:

The port of Honnavar is located in Latitude 14° 16.30' North and longitude 74° 7.10' East at the mouth of Sharavati river in Uttara Kannada District. The port of Honnavar is surrounded by hills, Forest and Sharavathi river. The location of the port is quite good as there is no environmental threat. GoK has accorded approval for the development of Honnavar port through private participation by M/S Honnavar Ports Pvt Ltd. (HPPL) The said firm has already obtained all the statutory clearances from the concerned department for the development of port. The construction of berth is under progress. They intend to handle 5 MTPA cargo.

## 8.3 2nd Stage Development of Karwar Port.

8.3.1 Proposed 2nd stage development of Karwar port under GOK at the estimated cost of Rs.1200 crores with 5 MTPA capacity with 5 berths for 14 mtrs. draft including construction of break water, dredging, rock dredging and other matching infrastructure facilities.

8.3.2 Proposed to provide railway sliding to Karwar port from Konkan railway in collaboration with Konkan Railway authorities

8.3.3 Consultants already prepared draft feasibility report, Detailed Project Report. Obtained EIA and CRZ clearance for the proposed development.

8.3.4 Construction of 880 mtrs. Length of northern break water with estimated cost of Rs. 125.00 crores sanctioned and work order already issued. and work is under progress. Construction of 250 mtrs. Length dedicated coastal berth under Sagar Mala project is in tendering process and work will be commenced shortly.

8.3.5 Proposed to construct – 1508 mtrs wharf at the estimated cost of Rs.331.76 crores. Approach channel, turning basin and along side berth -14 mtrs draft will be provided at the estimated dredging cost of Rs. 171.00 crores.

8.3.6 By reclamation at the estimated cost of Rs.13.73 crores, 70 hectares of additional port land will be made available for providing required infrastructure.

8.3.7 Proposed to construct transit sheds, cold storage, gantry cranes, harbour cranes, communication tower, reaf stacks, pay loader, fork lifts, fire fighting systems on line with OISD 156 requirements, navigational aids, electrification, water supply and other matching infrastructures facilities at estimated cost of Rs.461.09 Crores.

8.3.8 The existing southern break water will be extended by 145 mtrs. At the estimated cost of Rs. 39.00 crores.

8.3.9 The 2nd stage development of Karwar port will boost up the economical, industrial, commercial, activities of Karnataka state and provide ample employment opportunities to the people of this region.

## 8.4 Development of Belikeri Port:

8.4.1 Belekeri Port is the fair season lighterage port located at distance of 30 K.M. south of Karwar Port in Ankola Taluka of Uttara Kannada District. Belekeri Port is ideal Port for export of Iron Ore and Manganese Ore & Other Bulk Cargoes. Belekeri Port is having vast stacking area of 150 Acres. The port is well connected with the road by NH-66 & NH-63 and Konkan Railway. It is envisaged to develop the port South of Belekeri near Keni as a satellite port to New Mangalore by Government of India under Sagarmala. Government of Karnataka has given consent for the feasibility report submitted by AECOM Consultants.

8.4.2 The forest department has seized iron ore heaps lying at Belikeri Port and close the main gate in February 2011. Since. then no activities is carried in the said port. Removal of iron ore heaps from Belikeri port is pre requisite for any further development.

8.4.3 The Government has sanctioned the Port Land in respect of (i)M/s Mallikarjun Shipping, Pvt. Ltd., (81,720 sqms)(ii)M/s Adani Enterprises Ltd. (1,09,611 Sqms)(iii)M/s Salgaon Mining Industries (32,000 Sqms)and (iv)M/s Rajmahal Silks (3,000 Sqms) through various orders for handling and export of Iron Ore. These companies created infrastructure at their own cost and exporting Iron Ore since 2004. Government has cancelled the allotment of port land in July 2010. M/s Adani enterprises ltd., brought the interim stay. M/s Mallikarjun shipping has submitted application for continuation of lease agreement of port land. M/s Rajmahal silk has filed the writ petition for squashing the government port land cancellation order.

8.4.4 These issues are to be addressed for taking up comprehensive development of Belikeri Port.

## 8.4.5 PROPOSED NEW PORT AT KENI VILLAGE NEAR BELEKERI PORT.

8.4.5.1 Ministry of Shipping (MoS). Government of India has prepared "Techno Economic Feasibility Report" (TEFR) for development of Belekeri Port near to Keni village as a Satellite port to New Mangalore Port Trust (NMPT) with 10 MTPA capacity.

8.4.5.2 Government of Karnataka has given concurrence to TEFR prepared by Ministry of Shipping.

## 8.5 Development of Old Mangalore Port.

In Old Mangalore Port following projects are taken up under sagarmala.

| Name of the Project | Cost in Crores | Date of Administrative Approval | Status/Remarks |
|---|---|---|---|
| Construction of Coastal Berth of 350 Mtrs at Old Mangalore Port. | 65 | 21.03.2018 | The process of obtaining Environmental and CRZ Clearance is under progress. Public hearing scheduled on 14th September 2019. |
| Capital Dredging at Old Mangalore Port | 29 | 21.03.2018 | The process of obtaining Environmental and CRZ Clearance is under progress. Public hearing scheduled on 14th September 2019. |

## 9 Agenda Item No.9

## 9.1 Appointment of M/s Price Water Coopers (PWC)

Government of Karnataka has appointed M/s Price Water Coopers as consultant for preparing Perspective Plan of development of minor ports of Karnataka State. They have already submitted the inception report and a meeting under the Chairmanship of Secretary Public Works, Ports & IWT department, was held on 19.10.2019 It was decided that PWC submit the pending gap in present polices, bench marking with other maritime states and to suggest changes with respect to port development and logistics issues.

## 10 Agenda Item No.10

## 10.1 Rail road connectivity for development of port sector:

The neighbouring major ports of New Mangalore Port & Mormugoa Port handle annually about 40 MTPA cargo. The lion share of the bulk cargo like, coal, steel, bauxite. iron ore, food grains, fertilizers are moved from these ports to Northern Karnataka / Central Karnataka hinterland. The Minor ports like, Krishnapattanam is handling 60 MTPA cargo per annum. This port is having vast stacking area and better rail/ road connectivity.

10.1.2 For efficient management and development of the port sector, better rail/road connectivity and availability of sufficient land is the pre-requisite.

10.1.3 **The completion of Hubli-Ankola rail line, Talguppa-Honnavar rail line** will provide better connectivity to the ports and hinterland, which will definitely provide better scope for the development of the minor ports in our state.

## 10.2 Rail siding to Karwar Port from Konkan railway (Shirwad):

Konkan Railway ccorporation Ltd., has prepared pre feasibility report for providing rail siding to karwar port connecting Karwar port to Konkan railway at shirwad for speedy evacuation of the cargo. Two alternative proposals have been studied and the cost of the project for the recommended proposal having 4.44 Km of tunnel length is estimated to be Rs. 558.69 Crores. i.e, Rs. 64.69 crores per Km.

## 10.3 Rail siding to Belikeri Port from Konkan railway (Harwada) :

Konkan Railway line is about 4 km from the site. The nearest railway station is Ankola which is about 6.7 km from the site on the SE direction. Harwada railway station is about 8 km on the North of the proposed site.

## 10.4 Bye pass road to Belikeri Port :

10.4.1 It is proposed to provide Bye pass road to Belekeri Port from NH 66. The Government has accorded permission for land acquisition vide G.O No. 09 LAU 2012 dated 16.04.2012.

10.4.2 The Land Acquisition officer initiated action for 12-18-06 Acres of land and the department has deposited 195.77 lakhs rupees with the A.C. Kumta.

10.4.3 Meanwhile, it is proposed to take up this project under Bharath Mala scheme of Government of India by NHAI. They are requesting to hand over the land to them for taking up the project. The Assistant Commissioner,Kumta is required to give Kabjja of the acquired land to port department so that, port department can hand over the said land to NHAI for construction of Bypass road.

## 10.5 Connecting Honnavar Port to NH-66.

It is proposed to connect the Honnavar Port (Kasarkod side) to NH-66 under Bharatmala Pariyojana Scheme by NHAI. The project cost is approximately 78 crores and the length of the road is 2.66 Km. In this regard tripartite agreement has already been signed and bipartite agreement is to be signed between Gok and NHAI.

After due deliberations it was resolved to take up above projects under IDD.

**Karnataka Maritime Board**
**Administrative Office: Directorate of Ports & Inland Water Transport Building, Baithkol, Karwar – 581302**
**Telephone: 08382- 221494 Fax: 08382 228918**
**Email: directoratep@gmail.com ; ceokmb2019@gmail.com**

No: CEO/KMB-01/BM/2019-20 Dated: 12.03.2020

To,

All the Members of Karnataka Maritime Board.

Sir/Madam,

Sub: Karnataka Maritime Board Proceedings of Karnataka Maritime Board 2nd Meeting held on 27.01.2020 at IAS Officers Association Building, Bengaluru-reg.

Ref: This office Meeting Notice of even No. dated 13.01.2020

****

With reference to the subject cited above, I am enclosing herewith the proceedings of the Karnataka Maritime Board 2nd Meeting which was held on 27.01.2020 under the Chairmanship of Additional Chief Secretary to the GOK at IAS Officers Association Building, Bengaluru.

This is for your kind information and needful action.

Encl: as above

Your's faithfully,

(Ujjwal Kumar Ghosh IAS)
Member Secretary and
Chief Executive Officer
Karnataka Maritime Board.

# ಅನುಬಂಧ-3

ಕರ್ನಾಟಕ ಜಲಸಾರಿಗೆ ಮಂಡಳಿ ಸಭೆಯಲ್ಲಿ ರಾಜ್ಯದ ಕಿರು ಬಂದರುಗಳನ್ನು ಸಾರ್ವಜನಿಕ ಖಾಸಗಿ ಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ಕೈಗೊಂಡ ನಿರ್ಣಯ

| ಕ್ರ.ಸಂ. | ಯೋಜನೆ ಹೆಸರು | ಪ್ರಸ್ತುತ ಹಂತ |
|---|---|---|
| 1. | ಕೇಣಿ ಬಂದರು ಅಭಿವೃದ್ಧಿ :<br><br>ಬೇಲೇಕೇರಿ-ಕೇಣಿ ಬಂದರನ್ನು ಸ್ವಿಸ್ ಚಾಲೆಂಜ್ ಮಾದರಿಯಲ್ಲಿ ರೂ.3997.00 ಕೋಟಿ ವೆಚ್ಚದಲ್ಲಿ 40 MTPA ಸಾಮರ್ಥ್ಯದ Deep Water All Weather Greenfield ಬಂದರನ್ನಾಗಿ ಅಭಿವೃದ್ಧಿಪಡಿಸುವುದು | ಸದರಿ ಪ್ರಸ್ತಾವನೆಯನ್ನು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 09.07.2021 ರಂದು ನಡೆದ 5ನೇ ಜಲಸಾರಿಗೆ ಮಂಡಳಿಯ ಸಭೆಯಲ್ಲಿ ಮಂಡಿಸಲಾಯಿತು. ಮಂಡಳಿಯಲ್ಲಿ ಚರ್ಚಿಸಿದ ನಂತರ ಪ್ರಸ್ತಾವನೆಯನ್ನು ಪರಿಶೀಲಿಸಲು ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಹಾಗೂ ಅಪರ ಮುಖ್ಯ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ರವರನ್ನೊಳಗೊಂಡಂತೆ, Sub-committee ರಚಿಸಲು ನಿರ್ಣಯಿಸಲಾಗಿದೆ.<br><br>ನಡವಳಿಯಂತೆ Sub-committee ಯನ್ನು ರಚಿಸಿದ್ದು, Sub-committee ಯು ದಿನಾಂಕ: 14.09.2021 ರಂದು ಸಭೆ ಸೇರಿ ಚರ್ಚಿಸಿ, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸ್ವಿಸ್ ಚಾಲೆಂಜ್ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಮುಂದಿನ ಜಲಸಾರಿಗೆ ಮಂಡಳಿ ಸಭೆಯಲ್ಲಿ ಮಂಡಿಸಬಹುದೆಂದು ನಿರ್ಣಯಿಸಲಾಗಿದೆ. ಅದರಂತೆ ಸದರಿ ಪ್ರಸ್ತಾವನೆಯನ್ನು 6ನೇ ಜಲಸಾರಿಗೆ ಮಂಡಳಿಯಲ್ಲಿ ಮಂಡಿಸಲಾಗಿದೆ. ಮಂಡಳಿಯ ನಡವಳಿಯಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| 2. | ಪಾವಿನಕುರ್ವೆ ಬಂದರು ಅಭಿವೃದ್ಧಿ :<br><br>ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಪಾವಿನಕುರ್ವೆಯಲ್ಲಿ 14 MTPA ಸಾಮರ್ಥ್ಯದ ಸರ್ವಋತು ಬಂದರನ್ನು ರೂ. 1967.50 ಕೋಟಿ ಮೊತ್ತದಲ್ಲಿ DBFOT ಮಾದರಿಯಲ್ಲಿ ಅಭಿವೃದ್ಧಿಪಡಿಸುವುದು. | 5 ನೇ ಜಲಸಾರಿಗೆ ಮಂಡಳಿ ಸಭೆಯಲ್ಲಿ ಪ್ರಸ್ತಾವನೆಯನ್ನು ಮಂಡಿಸಲಾಯಿತು. ಮಂಡಳಿಯ ಸಭೆಯಲ್ಲಿ ಚರ್ಚಿಸಿದ ನಂತರ Project Information Memorandum (PIM) ಮತ್ತು Expression of Interest (EOI) ನ್ನು ಪ್ರಕಟಿಸಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಅನುಮತಿ ನೀಡಿದ್ದು, ಅದರಂತೆ, PIM ನ್ನು ತಯಾರಿಸಿ ದಿನಾಂಕ: 18.09.2021 ರಂದು Expression of Interest (EOI) ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರೆಯಲಾಗಿರುತ್ತದೆ. |

| ಕ್ರ.ಸಂ. | ಯೋಜನೆ ಹೆಸರು | ಪ್ರಸ್ತುತ ಹಂತ |
|---|---|---|
| | | ಈ ಯೋಜನೆಯನ್ನು ಕಾರ್ಯಗತಗೊಳಿಸಲು ಆಸಕ್ತ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ದಿನಾಂಕ : 05.10.2021 ರಂದು ಮುಂಬೈಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ಸಭೆಯಲ್ಲಿ ಉದ್ದಿಮೆದಾರರಿಂದ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿರುತ್ತದೆ.<br><br>ಸದರಿ ಪ್ರಸ್ತಾವನೆಯನ್ನು 6ನೇ ಜಲಸಾರಿಗೆ ಮಂಡಳಿಯಲ್ಲಿ ಮಂಡಿಸಲಾಗಿದ್ದು, ಸಭೆಯ ನಡವಳಿಯಂತೆ ಮುಂದಿನ ಕ್ರಮಕೈಗೊಳ್ಳಲಾಗುವುದು. |

ನಿರ್ದೇಶಕರು,
ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ಕಾರವಾರ